ಸಚಿವರುಗಳ ಮೊಬೈಲ್/ ದೂರವಾಣಿ ವೆಚ್ಚ

84(88) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಜೂನ್ 2013ರಿಂದ ಇಲ್ಲಿಯವರೆಗೂ ರಾಜ್ಯ ಸಚಿವ ಸಂಪುಟದ ಸಚಿವರುಗಳು, ಮುಖ್ಯಮಂತ್ರಿಗಳೂ ಸೇರಿದಂತೆ, ಮೊಬೈಲ್ ಮತ್ತು ಮನೆ/ಕಛೇರಿಗಳ ದೂರವಾಣಿ ವೆಚ್ಚ ವೆಷ್ಟು ;

(ಅ) ಈ ವೆಚ್ಚಗಳಿಗೆ ಗರಿಷ್ಠ ಮಿತಿ ವಿಧಿಸಲಾಗಿದೆಯೇ ?

ಶ್ರೀ ಸಿದ್ದರಾಮಯ್ಯ :–ಮಾನ್ಯ ಮುಖ್ಯಮಂತ್ರಿಗಳು

(ಅ) ಮನೆ/ಕಛೇರಿಯ ದೂರವಾಣಿ ವೆಚ್ಚ: ರೂ. 20,72,060–00 ಮೊಬೈಲ್ ದೂರವಾಣಿ ವೆಚ್ಚ: ರೂ.84,515–00 ಒಟ್ಟು ವೆಚ್ಚ: ರೂ.21,56,575–00

(ಆ) ಮಾನ್ಯ ಮುಖ್ಯಮಂತ್ರಿಗಳು/ಮಾನ್ಯ ಸಚಿವ ಸಂಪುಟ ಸಚಿವರುಗಳ ಸ್ಥಿರ ದೂರವಾಣಿಗಳ ವೆಚ್ಚಗಳಿಗೆ ಯಾವುದೇ ಗರಿಷ್ಠ ಮಿತಿ ಇರುವುದಿಲ್ಲ.

ಮಾನ್ಯ ಮುಖ್ಯಮಂತ್ರಿಯವರನ್ನು ಹೊರತುಪಡಿಸಿ ಮಾನ್ಯ ಸಚಿವರುಗಳ ಮೊಬೈಲ್ ದೂರವಾಣಿ ವೆಚ್ಚಗಳಿಗೆ ಮಾಸಿಕ ರೂ. 5,000/–ಗಳ ಗರಿಷ್ಟ ಮಿತಿಯನ್ನು ವಿಧಿಸಲಾಗಿದೆ.

ನೂತನ ಮರಳು ನೀತಿಯಿಂದ ಉಂಟಾಗಿರುವ ಗೊಂದಲ

87(258) ಶ್ರೀ ಹ್ಯಾರೀಸ್ ಎನ್.ಎ.(ಶಾಂತಿನಗರ) :– ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:–

(ಅ) ನೂತನ ಮರಳು ನೀತಿ ಅಡಕವಾಗಿರುವ ವಿವರ ಹಾಗೂ ಮರಳು ಲಭ್ಯತೆಯ ಕುರಿತು ಕೈಗೊಂಡ ಪರಿಣಾಮಕಾರಿ ಕ್ರಮಗಳೇನು ;

(ಅ) ನೂತನ ಮರಳು ನೀತಿಯಿಂದ ಉಂಟಾಗಿರುವಗೊಂದಲಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳೇನು ;